MANGALORE UNIVERSITY

# PROCEEDINGS OF THE THIRD REGULAR MEETING OF THE ACADEMIC COUNCIL FOR THE YEAR 2015-16 HELD ON 25-1-2016 AT THE NEW SENATE HALL, MANGALORE UNIVERSITY ADMINISTRATIVE BLOCK AT 11:00 AM

Honourable Vice Chancellor extended a welcome to all members, invitees and media and press persons to the meeting

III Matters from Vice Chancellor, Syndicate, Faculties and Boards of Studies

AGENDA NO: ACC Gen Meet 3:1 (2015-16)

Subject: PhD Course Work Revised Syllabus of Degrees coming under Faculty of Arts - - Approval reg

Resolution: PhD Course Work Revised Syllabi of Faculty of Arts – Kannada / English / Political Science / History / Sociology / Social Work / Economics / Mass Communication and Journalism / Hindi were approved.

AGENDA NO: ACC Gen Meet 3:3 (2015-16)

Subject: MA Kannada Elective Course on Kodava Studies – Syllabus reg.

Resolution: This Elective Course should be selected by all MA Kannada students. If the minimum required number of student opt for this course, in the absence of lecturers to teach the said course, Experts from outside may be invited to teach the same. Along with this decision, the syllabus was approved.

AGENDA NO: ACC Gen Meet 3:4 (2015-16)

Subject: MA Political Science Revised Syllabus – Approval reg.

Resolution: Revised Syllabus was approved. However, it needs to be revised again, when the University adopts UGC Regulations for Choice based credit system.

AGENDA NO: ACC Gen Meet 3:5 (2015-16)

Subject: MSW Revised Syllabus

Resolution: As the University would be adopting UGC Regulations for Choice based credit system from 2016-17, the Chairperson, Board of Studies was advised to revise it after taking advice of experts in the field of Social Work and therefore it was deferred.

AGENDA NO: ACC Gen Meet 3:12 (2015-16)



Registrar
Mangalore University
MangalaGangothri - 574199

Subject: MSc Yogic Science Revised Syllabus

Resolution: Revised Syllabus was approved. However, it needs to be revised again, when the University adopts UGC Regulations for Choice based credit system.

AGENDA NO: ACC Gen Meet 3:20 (2015-16)

Subject: PhD Course Work Syllabus of Degrees coming under Faculty of Science and Technology – Approval reg.

Resolution: Faculty of Science and Technology – Applied Zoology/Applied Botany/Physics/ Yogic Science/Biosciences/Chemistry/Industrial Chemistry/Biotechnology/ Mathematics/Biochemistry/ Statistics/Materials Science/Psychology/Computer Science/Marine Geology/Microbiology/Electronics/Library and Information Science PhD Course Work Syllabi were approved

AGENDA NO: ACC Gen Meet 3:21 (2015-16)

Subject: PhD Course Work Syllabus of Degrees coming under Faculty of Commerce

Resolution: Faculty of Commerce – Commerce/Business Administration PhD Course Work Syllabi Approved

AGENDA NO: ACC Gen Meet 3:22 (2015-16)

Subject: PhD Course Work Syllabus of Degrees coming under Faculty of Education

Resolution: Faculty of Education– Physical Education / Education PhD Course Work Syllabi Approved

AGENDA NO: ACC Gen Meet 3:27 (2015-16)

Subject: MA History Syllabus

Resolution: Revised Syllabus was approved. However, it needs to be revised again, when the University adopts UGC Regulations for Choice based credit system.

Sd/-
Registrar

Sd/-
Vice Chancellor

This is a true transcript of excerpts of the above-mentioned meeting relating to curriculum.

Registrar

Registrar
Mangalore University
MangalaGangothri - 574199

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 25.01.2016ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಹೊಸ ಸೆನೆಟ್ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2015–16ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು**

ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು, ಆಹ್ವಾನಿತರನ್ನು ಹಾಗೂ ಮಾಧ್ಯಮ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿದರು.

## ಪ್ರಾರಂಭಿಕ

1. ಮಾನ್ಯ ಕುಲಪತಿಯವರು ನೂತನ ಕುಲಸಚಿವ (ಪರೀಕ್ಷಾಂಗ) ರವರಾದ ಡಾ.ಎ.ಎಂ.ಖಾನ್, ಪ್ರಾಧ್ಯಾಪಕರು, ಸ್ನಾತಕೋತ್ತರ ಇಲೆಕ್ಟ್ರಾನಿಕ್ಸ್ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರು ಸರ್ಕಾರದ ಆದೇಶ ಸಂಖ್ಯೆ ಇಡಿ 108 ಯುಡಿವಿ 2015 ದಿನಾಂಕ 02.12.2015ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ)ರಾಗಿ ದಿನಾಂಕ 03.12.2015ರಿಂದ ನೇಮಕಗೊಂಡಿರುವ ವಿಚಾರವನ್ನು ಸಭೆಗೆ ತಿಳಿಸಿ ನೂತನ ಕುಲಸಚಿವ (ಪರೀಕ್ಷಾಂಗ) ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

2. ಮಂಗಳೂರು ವಿಶ್ವವಿದ್ಯಾನಿಲಯದ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಿರುವ ಪ್ರೊ. ಶ್ರೀಪಾದ ಕೆ. ಎಸ್., ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

3. ಮಂಗಳೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಿರುವ ಪ್ರೊ. ಜಯರಾಜ್ ಅಮೀನ್, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

4. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)(vi)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡಿರುವ ಪ್ರೊ. ರಹಮತ್ ಅಲಿ, ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು, ಕಂದಕ, ಮಂಗಳೂರು – 575001 ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

5. ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಆಗಿ ಸೇವೆ ಸಲ್ಲಿಸಿ ಸದರಿ ಹುದ್ದೆಗೆ ನೇಮಕಾತಿಗೊಂಡ ಅವಧಿ ಮುಗಿದು ಕರ್ತವ್ಯದಿಂದ ಬಿಡುಗಡೆಗೊಂಡ ಪ್ರೊ. ಬಿ. ನಾರಾಯಣ, ಇವರು ಶೈಕ್ಷಣಿಕ ಮಂಡಳಿ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

6. ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ನೆಲೆಯಲ್ಲಿ ಸದಸ್ಯರಾಗಿ ಭಾಗವಹಿಸುತ್ತಿದ್ದು, ಸದರಿ ಹುದ್ದೆಯಿಂದ ಬಿಡುಗಡೆಗೊಂಡ ಪ್ರೊ. ಭೋಜ ಪೂಜಾರಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಇವರು ಶೈಕ್ಷಣಿಕ ಮಂಡಳಿ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

7. ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ನೆಲೆಯಲ್ಲಿ ಶೈಕ್ಷಣಿಕ ಮಂಡಳಿ ಸದಸ್ಯರಾಗಿ ಭಾಗವಹಿಸುತ್ತಿದ್ದು, ಸದರಿ ಹುದ್ದೆಯಿಂದ ಬಿಡುಗಡೆಗೊಂಡ ಪ್ರೊ.ಎಂ.ರಾಜಶೇಖರ್, ಪ್ರಾಧ್ಯಾಪಕರು,ಸ್ನಾತಕೋತ್ತರ ಜೀವವಿಜ್ಞಾನ ಅಧ್ಯಯನ ವಿಭಾಗ ಇವರು ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

8. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 30(1) (vi)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡು ಸದಸ್ಯತ್ವದ ಅವಧಿ ಮುಗಿದು ಬಿಡುಗಡೆಗೊಂಡ ಶ್ರೀ ಎಸ್.ವಿ. ಅಪ್ಪಾಜಿ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿರಾಜಪೇಟೆ 571 218 ಇವರು ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

I ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆ ಪಡೆಕೊಂಡ ಪರಿನಿಯಮಗಳು / ವಿನಿಯಮಗಳ ವಿವರ.

ಇಲ್ಲ.

II ದಿನಾಂಕ 04.11.2015 ರಂದು ನಡೆದ ಶೈಕ್ಷಣಿಕ ಮಂಡಳಿಯ 2015–16ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**– ದೃಢೀಕರಿಸಲಾಯಿತು. –**

**III ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು:**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:1(2015–16)

ವಿಷಯ: ಕಲಾ ನಿಕಾಯದ ವ್ಯಾಪ್ತಿಯಡಿ ಬರುವ ಪಿಹೆಚ್.ಡಿ. ಪದವಿಗಳ ಕೋರ್ಸುವರ್ಕಿನ ಪರಿಷ್ಕೃತ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

ನಿರ್ಣಯ: ಕಲಾ ನಿಕಾಯದಡಿ ಬರುವ ಕನ್ನಡ /ಇಂಗ್ಲೀಷ್/ರಾಜ್ಯಶಾಸ್ತ್ರ/ಇತಿಹಾಸ/ಸಮಜಶಾಸ್ತ್ರ/ಸಮಾಜಕಾರ್ಯ

ಅರ್ಥಶಾಸ್ತ್ರ/ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ/ಹಿಂದಿ ಪಿಹೆಚ್.ಡಿ. ಪದವಿಗಳ ಕೋರ್ಸುವರ್ಕಿನ ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:2(2015–16)

ವಿಷಯ: ಬಿ.ಎ. (ಭದ್ರತೆ ಮತ್ತು ಪತ್ತೇದಾರಿ ವಿಜ್ಞಾನ) ಪದವಿಯ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:3(2015–16)

ವಿಷಯ: ಎಂ.ಎ. ಕನ್ನಡ ಪದವಿಗೆ ಅಳವಡಿಸಲಿರುವ 'ಕೊಡವ ಅಧ್ಯಯನ' ಐಚ್ಛಿಕ ಪತ್ರಿಕೆಯ ಪಠ್ಯಕ್ರಮದ ಬಗ್ಗೆ.

ನಿರ್ಣಯ: ಸದ್ರಿ ಐಚ್ಛಿಕ ಪತ್ರಿಕೆಯನ್ನು ಎಂ.ಎ ಕನ್ನಡ ಪದವಿಯ ಎಲ್ಲಾ ವಿದ್ಯಾರ್ಥಿಗಳೂ ಆಯ್ಕೆ ಮಾಡುವಂತೆ ಹಾಗೂ ನಿಗದಿತ/ ಕನಿಷ್ಠ ಸಂಖ್ಯೆಗಿಂತ ಅಧಿಕ ವಿದ್ಯಾರ್ಥಿಗಳು ಈ ಪತ್ರಿಕೆಯನ್ನು ಆಯ್ಕೆ ಮಾಡಿದ್ದಲ್ಲಿ ಸದರಿ ವಿಷಯವನ್ನು ಬೋಧಿಸಲು ಉಪನ್ಯಾಸಕರು ಲಭ್ಯವಿಲ್ಲದಿದ್ದಲ್ಲಿ ಅಗತ್ಯ ಬಾಹ್ಯ ವಿಷಯ ತಜ್ಞರನ್ನು ಆಹ್ವಾನಿಸಿ ಬೋಧಿಸಬೇಕೆನ್ನುವ ನಿರ್ಣಯದೊಂದಿಗೆ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:4(2015–16)

ವಿಷಯ: ಎಂ.ಎ. ರಾಜ್ಯಶಾಸ್ತ್ರ ಪದವಿಯ ಪರಿಷ್ಕೃತ ಪಠ್ಯಕ್ರಮದ ಬಗ್ಗೆ.

ನಿರ್ಣಯ: ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯವು ಯುಜಿಸಿ ಮಾದರಿಯ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಜಾರಿಗೊಳಿಸುವಾಗ ಮರು ಪರಿಷ್ಕರಿಸಬೇಕೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಶೈ.ಸಾಸ.3:5 (2015–16)

ವಿಷಯ: ಎಂ. ಎಸ್. ಡಬ್ಲ್ಯೂ ಪದವಿಯ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಶೈಕ್ಷಣಿಕ ವರ್ಷ 2016–17ನೇ ಸಾಲಿನಿಂದ ಸ್ನಾತಕೋತ್ತರ ಕೋರ್ಸುಗಳಿಗೆ ಯುಜಿಸಿ ಮಾದರಿಯ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಅಳವಡಿಸುವುದರಿಂದ ಎಂ.ಎಸ್.ಡಬ್ಲ್ಯೂ ಪದವಿಯ ಪಠ್ಯಕ್ರಮವನ್ನು ತಜ್ಞರ ಸಲಹೆ ಪಡೆದುಕೊಂಡು ಪರಿಷ್ಕರಿಸಲು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ತಿಳಿಸಿ ಕಾರ್ಯಸೂಚಿಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:6(2015–16)

ವಿಷಯ: ಎಂ.ಎ. ಭರತನಾಟ್ಯಂ ಪದವಿಯ ಪಠ್ಯಕ್ರಮದ ತಿದ್ದುಪಡಿ ಬಗ್ಗೆ.

ನಿರ್ಣಯ: ಸಂಯೋಜಿತ ಕಾಲೇಜಿನಲ್ಲಿ ಈ ಕೋರ್ಸು ಅಳವಡಿಸಲಾಗುತ್ತಿರುವ ಕಾರಣ ಕಾಲೇಜಿನ ಪ್ರಾಂಶುಪಾಲರುಗಳಿಗೆ ವಿಶೇಷ ಆಹ್ವಾನಿತರನ್ನಾಗಿ ಅಧ್ಯಯನ ಮಂಡಳಿಗೆ ಆಹ್ವಾನಿಸಬಹುದೆಂಬುದಾಗಿ ನಿರ್ಣಯಿಸಲಾಯಿತು. ಜೊತೆಗೆ ಸಂಯುಕ್ತ ಅಧ್ಯಯನ ಮಂಡಳಿ ನಿರ್ಣಯದಂತೆ ಪತ್ರಿಕೆ XV-Study of Folk Dance Forms of Indian ಪತ್ರಿಕೆಯನ್ನು ಪಠ್ಯಕ್ರಮದಿಂದ ತೆಗೆದು ಹಾಕಲು ಒಪ್ಪಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:7(2015–16)

ವಿಷಯ: ಮಾಸ್ಟರ್ ಆಫ್ ಕಮ್ಯೂನಿಕೇಶನ್ ಆಂಡ್ ಜರ್ನಲಿಸಂ (ಎಂ.ಸಿ.ಜೆ.) ಪದವಿಯ ಪರೀಕ್ಷಾ ಕಾರ್ಯಯೋಜನೆ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ಅಧ್ಯಯನ ಮಂಡಳಿಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:8(2015–16)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಅಂಚೆ ತೆರಪಿನ ಶಿಕ್ಷಣ ಕಾರ್ಯಕ್ರಮದಡಿ ಪ್ರಾರಂಭಿಸಲಾದ ಎಂ. ಎ. ಹಿಂದಿ ಪದವಿಗೆ ನಿಗದಿಪಡಿಸಲಾದ ಪ್ರವೇಶಾರ್ಹತೆಯ ಬಗ್ಗೆ.

ನಿರ್ಣಯ: ಅಧ್ಯಯನ ಮಂಡಳಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:9(2015–16)

ವಿಷಯ: Masters Degree in Visual Arts (MVA) ಪದವಿಯ ವಿನಿಯಮ ಮತ್ತು ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಯುಜಿಸಿ ಮಾದರಿಯ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಜಾರಿಗೊಳಿಸುವಾಗ ಸೆಮಿಸ್ಟರ್ ಪದ್ಧತಿಯಲ್ಲೇ ಪಠ್ಯಕ್ರಮವನ್ನು ಪರಿಷ್ಕರಿಸಬೇಕೆಂದು ನಿರ್ಣಯಿಸಲಾಯಿತು. ಜೊತೆಗೆ ಮುಂದಿನ ದಿನಗಳಲ್ಲಿ ಬೇರೆ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ವಿಷಯ ತಜ್ಞರನ್ನು ಒಳಗೊಂಡಂತೆ ಹೆಚ್ಚುವರಿ ಸದಸ್ಯರೊಂದಿಗೆ ಅಧ್ಯಯನ ಮಂಡಳಿಯನ್ನು ರಚಿಸಲು ಸಲಹೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:10(2015–16)

ವಿಷಯ: ಬಿ.ಎಸ್ಸಿ. ಪದವಿಯ ಸಂಖ್ಯಾಶಾಸ್ತ್ರ ಐಚ್ಛಿಕ ವಿಷಯದ 5 ಮತ್ತು 6ನೇ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿ ಅಳವಡಿಸಲಾದ ಪ್ರಾಯೋಗಿಕ ಪರೀಕ್ಷೆಗಳ ಪಠ್ಯಕ್ರಮದ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:11(2015–16)

ವಿಷಯ: ಎಂ.ಎಸ್ಸಿ. ಭೌತಶಾಸ್ತ್ರ ಪದವಿಯ ಪ್ರವೇಶಾರ್ಹತೆಗೆ ಸಂಬಂಧಿಸಿದ ವಿನಿಯಮದ ತಿದ್ದುಪಡಿ ಬಗ್ಗೆ.

ನಿರ್ಣಯ: ತಿದ್ದುಪಡಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:12(2015–16)

ವಿಷಯ: ಎಂ.ಎಸ್ಸಿ. ಯೋಗ ವಿಜ್ಞಾನ ಪದವಿಯ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯವು ಯುಜಿಸಿ ಮಾದರಿಯ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಜಾರಿಗೊಳಿಸುವಾಗ ಮರು ಪರಿಷ್ಕರಿಸಬೇಕೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:13(2015–16)

ವಿಷಯ: ವೃತ್ತಿ ಆಧಾರಿತ ಕಾರ್ಯಕ್ರಮದಡಿ ಪ್ರಾರಂಭಿಸಲಿರುವ Aviation and Hospitality Management ಕೋರ್ಸಿನ ಪಠ್ಯಕ್ರಮದ ಬಗ್ಗೆ.

ನಿರ್ಣಯ: ಸದರಿ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಜೊತೆಗೆ ಯು.ಜಿ.ಸಿ.ಯಿಂದ ಮಾನ್ಯತೆಗೊಂಡು ಅನುಮೋದನೆಗೊಂಡಿರುವ Add-on courseಗಳು ಹಾಗೂ vocational courseಗಳನ್ನು ಹೆಚ್ಚು ಹೆಚ್ಚು ಪ್ರಾರಂಭಿಸಲು ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:14(2015–16)

ವಿಷಯ: ಬಿ. ವೊಕೇಶನಲ್ ಟೂರಿಸಂ ಆ್ಯಂಡ್ ಸರ್ವೀಸ್ ಇಂಡಸ್ಟ್ರಿ ಕೋರ್ಸಿನ ಪಠ್ಯಕ್ರಮದ ಬಗ್ಗೆ.

ನಿರ್ಣಯ: ಸದರಿ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:15(2015–16)

ವಿಷಯ: ಬಿ. ವೊಕೇಶನಲ್ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಆ್ಯಂಡ್ ರಿಟೈಲ್ ಬಿಸಿನೆಸ್ ಕೋರ್ಸಿನ ಪಠ್ಯಕ್ರಮದ ಬಗ್ಗೆ.

ನಿರ್ಣಯ: ಸದರಿ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:16(2015–16)

ವಿಷಯ: ಬಿ. ಕಾಂ. ಪದವಿಯ Business Taxation ಪತ್ರಿಕೆಗೆ ಹೆಚ್ಚುವರಿ ಪರಾಮರ್ಶನ ಪುಸ್ತಕವನ್ನು ಅಳವಡಿಸಿರುವ ಬಗ್ಗೆ.

ನಿರ್ಣಯ: ಅಧ್ಯಯನ ಮಂಡಳಿಯು ಸದರಿ ಪತ್ರಿಕೆಗೆ ಸೂಚಿಸಿರುವ ಹೆಚ್ಚುವರಿ ಪರಾಮರ್ಶನ ಪುಸ್ತಕಗಳ ಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:17(2015–16)

ವಿಷಯ: ಪದವಿ ಮಟ್ಟದ ಕೋರ್ಸುಗಳ ನಾಲ್ಕು ಸೆಮಿಸ್ಟರುಗಳಲ್ಲಿ ಭಾಷಾ ವಿಷಯವನ್ನು ಅಳವಡಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:18(2015–16)

ವಿಷಯ: ನಾಲ್ಕನೇ ಸೆಮಿಸ್ಟರಿನ ಬಿ.ಎಸ್ಸಿ. ಪದವಿಯ ಇಂಗ್ಲೀಷ್ ಭಾಷಾ ವಿಷಯದ ಪಠ್ಯಕ್ರಮದ ಬದಲಾವಣೆ ಬಗ್ಗೆ.

ನಿರ್ಣಯ: ಘಟನೋತ್ತರ ಅನುಮತಿಯೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಶೈ.ಸಾಸ3:19(2015–16)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಕುಶಾಲನಗರ, ಕೊಡಗು ಜಿಲ್ಲೆ ಇಲ್ಲಿ ಹೊಸ ಸ್ನಾತಕೋತ್ತರ ವಿಭಾಗಗಳು ಹಾಗೂ ಹುದ್ದೆಗಳ ಸೃಜನೆ ಬಗ್ಗೆ.

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕರಡು ಅನುಶಾಸನವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:20(2015–16)

ವಿಷಯ: ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವ್ಯಾಪ್ತಿಯಡಿ ಬರುವ ಪಿಹೆಚ್.ಡಿ. ಪದವಿಗಳ ಕೋರ್ಸುವರ್ಕಿನ ಪರಿಷ್ಕೃತ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

ನಿರ್ಣಯ: ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವ್ಯಾಪ್ತಿಯಡಿ ಬರುವ ಅನ್ವಯಿಕ ಪ್ರಾಣಿಶಾಸ್ತ್ರ/ಅನ್ವಯಿಕ ಸಸ್ಯಶಾಸ್ತ್ರ/ಭೌತಶಾಸ್ತ್ರ/ಯೋಗ ವಿಜ್ಞಾನ/ಜೀವ ವಿಜ್ಞಾನ/ರಸಾಯನಶಾಸ್ತ್ರ/ಕೈಗಾರಿಕಾ ರಸಾಯನಶಾಸ್ತ್ರ/ ಜೀವ ತಂತ್ರಜ್ಞಾನ/ಗಣಿತಶಾಸ್ತ್ರ/ಜೀವ ರಸಾಯನಶಾಸ್ತ್ರ/ಸಂಖ್ಯಾಶಾಸ್ತ್ರ/ವಸ್ತು ವಿಜ್ಞಾನ/ಮನ:ಶಾಸ್ತ್ರ/ಗಣಕ ವಿಜ್ಞಾನ/ಸಾಗರ ಭೂ ವಿಜ್ಞಾನ/ಸೂಕ್ಷ್ಮಾಣು ಜೀವ ವಿಜ್ಞಾನ/ಇಲೆಕ್ಟ್ರಾನಿಕ್ಸ್/ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪಿಹೆಚ್.ಡಿ. ಪದವಿಗಳ ಕೋರ್ಸುವರ್ಕಿನ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:21(2015–16)

ವಿಷಯ: ವಾಣಿಜ್ಯ ನಿಕಾಯದ ವ್ಯಾಪ್ತಿಯಡಿ ಬರುವ ಪಿಹೆಚ್.ಡಿ. ಪದವಿಗಳ ಕೋರ್ಸುವರ್ಕಿನ ಪರಿಷ್ಕೃತ ಪಠ್ಯಕ್ರಮಗಳ ಅನುಮೋದನೆ ಬಗ್ಗೆ.

ನಿರ್ಣಯ: ವಾಣಿಜ್ಯ ನಿಕಾಯದ ವ್ಯಾಪ್ತಿಯಡಿ ಬರುವ ವಾಣಿಜ್ಯ/ವ್ಯವಹಾರ ಆಡಳಿತ ವಿಷಯದ ಪಿಹೆಚ್.ಡಿ. ಪದವಿಗಳ ಕೋರ್ಸುವರ್ಕಿನ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:22(2015–16)

ವಿಷಯ: ಶಿಕ್ಷಣ ನಿಕಾಯದ ವ್ಯಾಪ್ತಿಯಡಿ ಬರುವ ಶಾರೀರಿಕ ಶಿಕ್ಷಣ ಪಿಹೆಚ್.ಡಿ. ಪದವಿಯ ಕೋರ್ಸುವರ್ಕಿನ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಶಿಕ್ಷಣ ನಿಕಾಯದ ವ್ಯಾಪ್ತಿಯಡಿ ಬರುವ ಶಾರೀರಿಕ ಶಿಕ್ಷಣ/ಶಿಕ್ಷಣ ಪದವಿಗಳ ಕೋರ್ಸುವರ್ಕಿನ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:23(2015–16)

ವಿಷಯ: ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಸೂಚನೆ ಪ್ರಕಾರ BBM, MCJ, MCMS, MLISc., MIB, MHRD, MBA (Tourism Administration) ಮತ್ತು M.Psy (HRDM) ಕೋರ್ಸುಗಳ ಶಿರೋನಾಮೆ ಬದಲಾವಣೆ ಬಗ್ಗೆ.

ನಿರ್ಣಯ: ಪ್ರೊ.ಮಲ್ಲಿಕಾರ್ಜುನಪ್ಪನವರು ಮಾತನಾಡಿ BBM ಬಗ್ಗೆ ಚರ್ಚೆ ಮಾಡಿ ಅದೇ ಉತ್ತಮ (BBA ಬದಲು BBM) ಎಂದು ಹೇಳಿದರು. ಆದರೆ ಸಭೆ UGC ಸಮ್ಮತ್ತವಿರುವ ಶಿರೋನಾಮೆಗಳನ್ನು ಇಟ್ಟುಕೊಳ್ಳುವುದು ಸೂಕ್ತ ಎಂದು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:24(2015–16)

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಪದವಿಗಳನ್ನು ಪೂರ್ತಿಗೊಳಿಸುವ ಗರಿಷ್ಠ ಅವಧಿಯನ್ನು ನಿಗದಿ ಪಡಿಸಲು ವಿಶ್ವವಿದ್ಯಾನಿಲಯ ಅನುದಾನ ಆಯೋಗವು ರಚಿಸಿರುವ ಮಾರ್ಗಸೂಚಿ ಬಗ್ಗೆ.

ನಿರ್ಣಯ: ಡೀನರುಗಳ ಸಮಿತಿಯನ್ನು ರಚಿಸಿ ಸಭೆ ಕರೆದು ಯುಜಿಸಿಯ ಮಾರ್ಗಸೂಚಿ ಪ್ರಕಾರ ಕರಡು ವಿನಿಯಮವನ್ನು ತಯಾರಿಸಿ ಮುಂದಿನ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:25(2015–16)

ವಿಷಯ: ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಪದ್ಧತಿಯ ಪದವಿಮಟ್ಟದ ಕೋರ್ಸುಗಳ ಅಡಿಶನಲ್ ಇಂಗ್ಲೀಷ್ ಭಾಷಾ ವಿಷಯದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಸದರಿ ವಿಷಯದ ಅಧ್ಯಯನ ಮಂಡಳಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:26(2015–16)

ವಿಷಯ: ಎಂ.ಎ. (ಇಂಗ್ಲೀಷ್) ಪದವಿಯ ಪ್ರವೇಶಾರ್ಹತೆಗೆ ಸಂಬಂಧಿಸಿದ ವಿನಿಯಮದ ತಿದ್ದುಪಡಿ ಬಗ್ಗೆ.

ನಿರ್ಣಯ: ಸದರಿ ವಿಷಯದ ಅಧ್ಯಯನ ಮಂಡಳಿ ಸಭೆಯು ಶಿಫಾರಸ್ಸು ಮಾಡಿರುವ ಪ್ರವೇಶಾರ್ಹತೆಯ ವಿನಿಯಮದ ತಿದ್ದುಪಡಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:27(2015–16)

ವಿಷಯ: ಎಂ.ಎ. ಇತಿಹಾಸ ಪದವಿಯ ಪರಿಷ್ಕೃತ ಪಠ್ಯಕ್ರಮದ ಬಗ್ಗೆ.

ನಿರ್ಣಯ: ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಯುಜಿಸಿ ಮಾದರಿಯ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಜಾರಿಗೊಳಿಸುವಾಗ ಮರು ಪರಿಷ್ಕರಿಸಬೇಕೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:28(2015–16)

ವಿಷಯ: ಎಂ.ಎಸ್ಸಿ. ಇನ್ ಮೆಡಿಕಲ್ ಫಿಸಿಕ್ಸ್ ಪದವಿಯ ವಿನಿಯಮ ಮತ್ತು ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು. ಯುಜಿಸಿ ಮಾದರಿಯ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯನ್ನು ಜಾರಿಗೊಳಿಸುವಾಗ ಮರು ಪರಿಷ್ಕರಿಸಬೇಕೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:29(2015–16)

ವಿಷಯ: ಯುವ ರೆಡ್ ಕ್ರಾಸ್ ಘಟಕವನ್ನು ಪದವಿಮಟ್ಟದ ಕೋರ್ಸುಗಳಲ್ಲಿ ಪಠ್ಯೇತರ ಚಟುವಟಿಕೆಯನ್ನಾಗಿ ಅಳವಡಿಸುವ ಬಗ್ಗೆ.

ನಿರ್ಣಯ: ಶುಲ್ಕ ಬಳಕೆ ಹಾಗೂ ಅಂಶಗಳ ಹಂಚಿಕೆಯನ್ನು ಎನ್.ಎಸ್.ಎಸ್. ಸಂಯೋಜಕರೊಂದಿಗೆ ಚರ್ಚಿಸಿ ಸರಿಪಡಿಸುವ ನಿರ್ಣಯದೊಂದಿಗೆ ಯುವ ರೆಡ್ ಕ್ರಾಸ್ ಘಟಕವನ್ನು ಪದವಿ ಮಟ್ಟದ ಕೋರ್ಸುಗಳಲ್ಲಿ ಪಠ್ಯೇತರ ಚಟುವಟಿಕೆಯನ್ನಾಗಿ ಅಳವಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:30(2015–16)

ವಿಷಯ: ಎಂ.ಎಸ್ಸಿ. ಕೈಗಾರಿಕಾ ಜೀವತಂತ್ರಜ್ಞಾನ ಪದವಿಯ ಪ್ರವೇಶಾರ್ಹತೆ, ಪರೀಕ್ಷಾ ಕಾರ್ಯಯೋಜನೆ ಹಾಗೂ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಸಾಸ3:31(2015–16)

ವಿಷಯ: ಎರಡು ವರ್ಷಗಳ ಬಿ.ಇಡಿ. ಪದವಿಗೆ ಕರ್ನಾಟಕ ರಾಜ್ಯ ಸರಕಾರವು ರಚಿಸಿರುವ ಏಕರೂಪದ ವಿನಿಯಮ ಮತ್ತು ಪಠ್ಯಕ್ರಮದ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಶೈ.ಸಾಸ3:32(2015–16)

ವಿಷಯ: ಎಸ್.ಎಸ್.ಬಿ.ಇ.ಟಿ. ಚಾಮರಾಜಪೇಟೆ, ಬೆಂಗಳೂರು ಸಂಸ್ಥೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಅಂಚೆತೆರಪಿನ ನಿರ್ದೇಶನಾಲಯದ ಅಧ್ಯಯನ ಕೇಂದ್ರವನ್ನಾಗಿ ಪ್ಯಾರ 3(ಜಿ)ದೂರಶಿಕ್ಷಣ ನಿರ್ದೇಶನಾಲಯ ಮಂಗಳೂರು ಇದರ ಪರಿನಿಯಮ ಪ್ರಕಾರ ಅಂಗೀಕರಿಸುವ ಕುರಿತು.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಶೈ.ಸಾಸ3:33(2015–16)

ವಿಷಯ: ವಿಶ್ವವಿದ್ಯಾನಿಲಯದ ಶಿಕ್ಷಕರುಗಳು ನೀಡುವ ಸಮಾಲೋಚನಾ ಸೇವೆಯನ್ನು (CONSULTANCY SERVICES) ನಿರ್ಬಂಧಿಸುವ ಅನುಶಾಸನಕ್ಕೆ ತಿದ್ದುಪಡಿ ಮಾಡುವ ಬಗ್ಗೆ

ನಿರ್ಣಯ: ಅನುಮೋದಿಸಲಾಯಿತು.

ಇತರ ವಿಷಯಗಳು:

1. ಕೋರ್ಸ್‍ವರ್ಕಿನ ತರಗತಿಗಳನ್ನು ಎಲ್ಲಾ ಖಾಸಗಿ/ಅನುದಾನಿತ/ಸಂಯೋಜಿತ ಕಾಲೇಜುಗಳ ಉಪನ್ಯಾಸಕರಿಗೆ ಅನುಕೂಲವಾಗುವಂತೆ ವಾರಂತ್ಯದಲ್ಲಿ (ಶನಿವಾರದಂದು) ಕೈಗೊಳ್ಳಲಾಗುತ್ತದೆ. ಆದರೆ Review of Literature ಪತ್ರಿಕೆಗೆ ಸಂಬಂಧಪಟ್ಟಂತೆ ಸಂಶೋಧನಾ ವಿದ್ಯಾರ್ಥಿಗಳು ವಾರದ ಯಾವುದೇ ದಿನದಂದು ಮಾರ್ಗದರ್ಶಕರಲ್ಲಿ ಚರ್ಚಿಸಬಹುದೆಂದು ಸಭೆಗೆ ತಿಳಿಸಲಾಯಿತು.

2. ಯಾವುದೇ ಪದವಿಯ ಪಠ್ಯಕ್ರಮವನ್ನು ಪರಿಷ್ಕರಿಸುವಾಗ/ ಸಿದ್ಧಪಡಿಸುವಾಗ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವ ವಿಶ್ವವಿದ್ಯಾನಿಲಯದ ಅನುಮತಿ ಪಡೆದು ಬಾಹ್ಯ ವಿಶ್ವವಿದ್ಯಾನಿಲಯಗಳ ವಿಷಯ ತಜ್ಞರನ್ನು ಆಹ್ವಾನಿಸಲು ಅಧ್ಯಯನ ಮಂಡಳಿ ಅಧ್ಯಕ್ಷರುಗಳಿಗೆ ತಿಳಿಸಲಾಯಿತು. ಹಾಗೂ ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರೂ ಸಲಹೆಗಳು ಇದ್ದಲ್ಲಿ ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಪತ್ರ ಬರೆದು ಸೂಚಿಸಬಹುದು ಎಂದು ಮಾನ್ಯ ಕುಲಪತಿಗಳು ಸಲಹೆ ನೀಡಿದರು.

3. ಪಠ್ಯಕ್ರಮವನ್ನು ರಚಿಸುವಾಗ ಮಾರುಕಟ್ಟೆಯಲ್ಲಿ ಲಭ್ಯವಿರುವ ಪಠ್ಯಪುಸ್ತಕವನ್ನೇ ಅಳವಡಿಸಿಕೊಳ್ಳುವುದು ಹಾಗೂ ಅತ್ಯಂತ ದುಬಾರಿ ಪುಸ್ತಕಗಳನ್ನು ಸಾಧ್ಯವಾದಷ್ಟು ಅಳವಡಿಸಿಕೊಳ್ಳಬಾರದಾಗಿ ಅಧ್ಯಯನ ಮಂಡಳಿ ಅಧ್ಯಕ್ಷರುಗಳಿಗೆ ತಿಳಿಸುವಂತೆ ತೀರ್ಮಾನಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು